ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಎದುರುದಾರರ ಪರ ವಕೀಲರಿಂದಃ-

ನಾನು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ಒಂದು ಅಂಚೆ ರಶೀದಿಯನ್ನು ನಿಆರ್-6 ಎಂದು, ಪೊಲೀಸರಿಗೆ ನೀಡಿರುವ ದೂರಿನ ದೃಢೀಕೃತ ನಕಲನ್ನು ನಿಆರ್-7 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಅರ್ಜಿದಾರರ ಪರ ವಕೀಲರಿಂದಃ-

ಈ ಕೇಸಿಗೆ ಸಂಬಂಧಪಟ್ಟಂತೆ ಎಲ್ಲಾ ದಾಖಲೆಗಳನ್ನು ನಾನು ತಿಳಿದುಕೊಂಡಿರುತ್ತೇನೆ. ನಿಆರ್-5ರ ಪ್ರಕಾರ ಅಪಘಾತವಾದ ದಿನ ರುದ್ರೇಶ್ ರವರ ಮನೆಯ ಬಳಿ ಗಾಡಿ ತೆಗೆದುಕೊಂಡು ಹೋಗಿದ್ದೆ ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ಅರ್ಜಿದಾರರು ದೂರಿನಲ್ಲಿ ಹೇಳಿರುವ ವಿಳಾಸ ಮತ್ತು ಕೃತ್ಯ ನಡೆದ ಸ್ಥಳದ ವಿಳಾಸ ಒಂದೇ ಎಂದರೆ ಸರಿ. ಪೊಲೀಸರಿಗೆ ಉತ್ತರ ನೀಡುವ ಕಾಲಕ್ಕೆ ಮತ್ತು ಈ ಕೇಸಿನಲ್ಲಿ ತಕರಾರು ಸಲ್ಲಿಸುವ ಕಾಲಕ್ಕೆ ನಾನು ವಕೀಲರ ಸಲಹೆ ಪಡೆದುಕೊಂಡಿರುತ್ತೇನೆ ಎಂದರೆ ಸರಿ.

ನಾನೇ ಮಾಲೀಕ ಮತ್ತು ಚಾಲಕನಾಗಿರುತ್ತೇನೆ. ನನ್ನ ವಿರುದ್ದ ಪೊಲೀಸರು ಸಲ್ಲಿಸುವ ದೋಷಾರೋಪಣಾ ಪಟ್ಟಿಯನ್ನು ನಾನು ಯಾವ ನ್ಯಾಯಾಲಯದಲ್ಲೂ ಪ್ರಶ್ನಿಸಿಲ್ಲ. ನಾನು ಶಾಮಿಯಾನ ಹಾಕಿದ್ದ ಬಗ್ಗೆ ಮನೆಯ ಮಾಲೀಕರನ್ನು ಕರೆಯಿಸಿ ಸಾಕ್ಷಿ ಮಾಡಿಸುತ್ತೇನೆ. ಅಪಘಾತವಾದ

ದಿನದಂದು ಮೃತ ವ್ಯಕ್ತಿ ಹೊರತುಪಡಿಸಿ ಬೇರೆ ಯಾರು ಇರಲಿಲ್ಲ ಆತ ಒಬ್ಬನೇ ಇದ್ದ ಎಂದರೆ ಸರಿ. ಶಾಮಿಯಾನ ಹಾಕಿ ವಾಹನವನ್ನು ಹಿಂದೆ ತೆಗೆದುಕೊಳ್ಳುತಿದ್ದಾಗ ಮೊಟಾರ ಸೈಕಲ್ ಗೆ ಡಿಕ್ಕಿ ಹೊಡಿಸಿದೆ ಎಂದು ದೋಷಾರೋಪಣಾ ಪಟ್ಟಿಯಲ್ಲಿ ನಮೂದು ಇದೆ ಎಂದರೆ ಸರಿಯಲ್ಲ.

ನನ್ನ ವಿರುದ್ದ ನಡೆಯುತ್ತಿದ್ದ ಪ್ರಕರಣಕ್ಕೆ ಸಂಬಂಧಪಟ್ಟಂತೆ ನನ್ನನ್ನು ಸಮರ್ಥಿಸಿಕೊಳ್ಳಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಅಪಘಾತ ಹೇಗೆ ಹಾಕಿದೆ ಎಂಬ ಬಗ್ಗೆ ಪೊಲೀಸ್ ದಾಖಲೆಗಳಲ್ಲಿ ಇದೆ ಎಂದರೆ ಸರಿ. ಅಪಘಾತವಾದ ಸ್ಥಳದಿಂದ ಮೃತಪಟ್ಟಿರುವ ವ್ಯಕ್ತಿಯ ವಿಳಾಸಕ್ಕೂ 100 ಮೀಟರ್ ಅಂತರ ಇದೆ. ಮೃತ ವ್ಯಕ್ತಿ ತಾವರೆಕೆರೆ ಗ್ರಾಮದವರು ಎಂದರೆ ಸರಿ. ತಾವರೆಕೆಗೆ ಗ್ರಾಮದಿಂದ ವಿರೂಪಸಂದ್ರ ಗ್ರಾಮದ ಬಾರ್ಡರ್ ಗೆ 150 ಮೀಟರ್ ಆಗುತ್ತದೆ. ಪೊಲೀಸರಿಗೆ ಅಪಘಾತವಾದ ಪ್ರಾರಂಭದಲ್ಲಿ ಮೃತ ವ್ಯಕ್ತಿ ಒಬ್ಬನೇ ಇದ್ದ ಕಾರಣ ನಿಮ್ಮ ವಾಹನ ಭಾಗಿಯಾಗಿರುವ ಬಗ್ಗೆ ಗೊತ್ತಾಗಿರಲಿಲ್ಲ ಎಂದರೆ ಸಾಕ್ಷಿ ನಾನೇ ಅಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ನಾನು ಸ್ಥಳದಲ್ಲಿ ಇರಲಿಲ್ಲ ಎಂದು ತೊರೀಸಲು ನಾನು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಮೃತ ವ್ಯಕ್ತಿಗೆ ಚಿಕಿತ್ಸೆ ಕೊಡಿಸಬೇಕೆಂಬ ಮಾನವೀಯತೆ ನಿಮಗೆ ಇರಲಿಲ್ಲ ಎಂದರೆ ಸಾಕ್ಷಿ ನಾನು ಅಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಮೋಟಾರ್ ಸೈಕಲ್ ಚಾಲಕನ ತಪ್ಪಿನಿಂದಲೇ ಅಪಘಾತವಾಗಿದೆ ಎಂದು ತೋರಿಸಲು ನಾನು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನಾನು ಠಾಣೆಗೆ ಹೋಗಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಮೋಟಾರ್ ಸೈಕಲ್ ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದು ಪೊಲೀಸರಿಗೆ ನೀವು ದೂರು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ತಪ್ಪಿನಿಂದ ಅಪಘಾತವಾಗಿದೆ ಎಂದು ಗೊತ್ತಿದ್ದರೂ ಸಹ ಪರಿಹಾರ ಹಣ ಕೊಡುವುದನ್ನು

ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ವಾಹನವನ್ನು ಬಿಡಿಸಿಕೊಂಡಿಲ್ಲ ನನ್ನ ತಪ್ಪು ಇಲ್ಲದೇ ಇರುವ ಕಾರಣ ಬಿಡಿಸಿಕೊಂಡಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಪೊಲೀಸರು ಐಎಂವಿ ವರದಿಯನ್ನು ಮತ್ತು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಮೃತ ವ್ಯಕ್ತಿ ಕತ್ತಲಲ್ಲಿ ಬಂದು ಅಪಘಾತಪಡಿಸಿಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ವ್ಯಕ್ತಿಯ ಜೊತೆ ಆ ದಿನ ಯಾರು ಇಲ್ಲದೇ ಇರುವ ಕಾರಣ ಅದನ್ನು ನಾನು ದುರುಯೋಗಪಡಿಸಿಕೊಂಡು ಪರಿಹಾರ ಹಣ ಕೊಡುವುದನ್ನು ತಪ್ಪಿಸಿಕೊಳ್ಳಲು ಸುಳ್ಳು ಸಂಗತಿಯನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

ಅಪಘಾತಕ್ಕೆ ಸಂಬಂಧಿಸಿದಂತೆ ನನ್ನ ಪರವಾಗಿ ಇಬ್ಬರು ಸಾಕ್ಷಿದಾರರನ್ನು ಮಾಡಿಸಿರುತ್ತೇನೆ ಎಂದರೆ ಸರಿ. ಇಬ್ಬರು ಸಾಕ್ಷಿದಾರರು ಅಪಘಾತವಾದ ಬಗ್ಗೆ ಸಾಕ್ಷಿ ನುಡಿದಿರುತ್ತಾರೆ ಎಂದರೆ ಸರಿ. ನನ್ನ ಸಾಕ್ಷಿದಾರರ ಹೇಳಿರುವ ಹೇಳಿಕೆಯ ವಿರುದ್ಧವಾಗಿ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕೇಸು ನಡೆದಾಗಿನಿಂದ ಅಂತಿಮವಾಗಿ ಏನೇನೂ ನಡೆದಿದೆ ಎಂಬ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿಯಲ್ಲ. ನನ್ನ ಪರವಾಗಿ ಹೇಳಿರುವ ಸಾಕ್ಷಿದಾರರ ಹೇಳಿರುವ ಬಗ್ಗೆ ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿಲ್ಲ ಏಕೆಂದರೆ ಅವರು ನೈಜ್ಯ ವಿಚಾರವನ್ನು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನನ್ನ ವಾಹನಕ್ಕೆ ವಿಮೆ ಇಲ್ಲದೇ ಇರುವ ಕಾರಣ ಹಣ ಕಟ್ಟಬೇಕಾಗುತ್ತದೆ ಎಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯಾ ಮಂಡಳಿಯ
ಪೀಠಾಧಿಕಾರಿಗಳು